# ಕರ್ನಾಟಕ ವಿವೇಕಾನಂದ ರಥಯಾತ್ರೆ – 2013

**ಸ್ವಾಮಿ ತ್ಯಾಗೀಶ್ವರಾನಂದ**

೨೦೧೩ರಲ್ಲಿ ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಆಚರಣೆಯ ಪ್ರಯುಕ್ತ ಕರ್ನಾಟಕದಲ್ಲಿ ರಾಮಕೃಷ್ಣ ಮಿಷನ್ನಿನ ವತಿಯಿಂದ ನಡೆದ 'ವಿವೇಕಾನಂದ ರಥಯಾತ್ರೆ'ಯು ಅಭೂತಪೂರ್ವ ಯಶಸ್ಸನ್ನು ಕಂಡಿತು. ಈ ರಥಯಾತ್ರೆಯ ಪ್ರಮುಖ ರೂವಾರಿಗಳೇ ಈ ವಿಶಿಷ್ಟ ಯಾತ್ರೆಯ ಬಗ್ಗೆ ಬರೆದಿರುವುದು ಅತ್ಯಂತ ವಿಶೇಷ. ಪೂಜ್ಯರು ದಾವಣಗೆರೆ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದಾರೆ.




ಸ್ವಾಮಿ ವಿವೇಕಾನಂದರ ೧೫೦ನೇ ಹುಟ್ಟು ಹಬ್ಬದ ಪ್ರಯುಕ್ತವಾಗಿ ಕರ್ನಾಟಕ ರಾಜ್ಯಾದ್ಯಂತ ''ವಿವೇಕಾನಂದ ರಥಯಾತ್ರೆ'' ಯನ್ನು ಏರ್ಪಡಿಸಲಾಗಿತ್ತು. ಈ ಸಂಭ್ರಮ ರಥಯಾತ್ರೆಯ ಒಂದು ಪಕ್ಷಿನೋಟವೇ ಈ ಲೇಖನವಾಗಿದೆ. ೨೦೧೩ ಮಾರ್ಚ್ ೧೩ನೇ ತಾರೀಖು ಭಗವಾನ್ ಶ್ರೀ ರಾಮಕೃಷ್ಣರ ಜಯಂತ್ಯುತ್ಸವದಂದು ಬಸವನಗುಡಿಯ ದೊಡ್ಡ ಗಣೇಶನ ದೇವಾಲಯದಿಂದ ಈ ರಥಯಾತ್ರೆಯು ರಾಮಕೃಷ್ಣರ ವಿವೇಕಾನಂದರ ಭಾವಪ್ರಚಾರ ಕಾರ್ಯವನ್ನು ರಥಯಾತ್ರೆಯ ಮೂಲಕ ವಿಧ್ಯುಕ್ತವಾಗಿ ಪ್ರಾರಂಭಿಸಿತ್ತು.

### ಭಾಗ-೧ : ರಥಯಾತ್ರೆಯ ಸಂಕಲ್ಪ

ಬಹಳ ವರ್ಷಗಳ ಹಿಂದೆ ೧೯೯೩ರಲ್ಲಿ ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದವರು ಸಂಚಾರಿ ಪುಸ್ತಕ ಮಾರಾಟ ಮಳಿಗೆಯನ್ನು ಹಾಗೂ ವಿವೇಕಾನಂದರ ಪುತ್ಥಳಿಯನ್ನು ಹೊಂದಿದ್ದ ಒಂದು ವಾಹನದೊಂದಿಗೆ 'ಸ್ವಾಮಿ ವಿವೇಕಾನಂದರ ರಥಯಾತ್ರೆ' ನಡೆಸಿ, ದೇಶದ ಉದ್ದಗಲಕ್ಕೂ ಸಂಚರಿಸಿದ್ದರು.

೨೦೧೧ರಲ್ಲಿ ಬೆಳಗಾವಿ ರಾಮಕೃಷ್ಣ ಮಿಷನ್ 'ವಿವೇಕ ಜ್ಯೋತಿ ಯಾತ್ರೆ' ಎಂಬ ಹೆಸರಿನಲ್ಲಿ ರಾಜ್ಯಾದ್ಯಂತ ಸಂಚರಿಸಿ, ಸ್ವಾಮೀಜಿ ಸಂದೇಶಗಳನ್ನು ಜಾಗೃತಗೊಳಿಸಿದ್ದರು. ಮತ್ತೆ ೨೦೧೩ನೇ ಇಸವಿಯಲ್ಲಿ ಸ್ವಾಮಿ ವಿವೇಕಾನಂದರು ಜನ್ಮ ತಾಳಿ ೧೫೦ ವರ್ಷಗಳು ಪೂರ್ಣಗೊಂಡವು. ಈ ೧೫೦ನೇ ಜಯಂತ್ಯುತ್ಸವದ ಅಂಗವಾಗಿ ಕರ್ನಾಟಕ ರಾಜ್ಯಾದ್ಯಂತ 'ವಿವೇಕಾನಂದ ರಥಯಾತ್ರೆ' ಮತ್ತು 'ರಾಮಕೃಷ್ಣ-ವಿವೇಕಾನಂದರ ಭಾವಪ್ರಚಾರ' ಮಾಡುವ ಸಂಕಲ್ಪವು ಬೆಳಗಾವಿ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ರಾಘವೇಶಾನಂದಜಿ ಮಹಾರಾಜರ ಕನಸಾಗಿತ್ತು. ಅದನ್ನು ನನಸಾಗಿಸಲು ಸ್ವಾಮಿಗಳು ಹೈದರಾಬಾದ್ ರಾಮಕೃಷ್ಣ ಆಶ್ರಮದವರೊಡನೆ ಮಾತನಾಡಿ ವಿವೇಕಾನಂದ ರಥಯಾತ್ರೆಗೆ ರಥವನ್ನು ಮತ್ತು ಜೊತೆಗೆ ಒಂದು ಸಂಚಾರಿ ಪುಸ್ತಕ ಮಾರಾಟ ವಾಹನದ ವ್ಯವಸ್ಥೆಯನ್ನು ಅಣಿಗೊಳಿಸಿದರು.

ಈ ಬೃಹತ್ ಮಟ್ಟದ ಯಾತ್ರೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು, ಬೆಂಗಳೂರಿನ ಬಸವನಗುಡಿ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜರೊಡನೆ ರಥಯಾತ್ರೆಯ ಮಹತ್ವ ಮತ್ತು ಅದರ ಆವಶ್ಯಕತೆಯನ್ನು ಕುರಿತು ಮಾತನಾಡಿದರು. ಪೂಜ್ಯರಾದ ಶ್ರೀ ಸ್ವಾಮಿ ಹರ್ಷಾನಂದಜಿ ಮಹಾರಾಜರು ಈ ಗುರುತರ ಜವಾಬ್ದಾರಿಯನ್ನು ಬಹಳ ಸಂತೋಷದಿಂದ ಒಪ್ಪಿದರು ಹಾಗೂ ರಥಯಾತ್ರೆಯ

ಸಂಪೂರ್ಣ ಜವಾಬ್ದಾರಿಯನ್ನು ಸ್ವಾಗತಿಸಿ ಕಾರ್ಯೋನ್ಮುಖರಾಗಲು ಸನ್ನದ್ಧರಾದರು.

ವಿವೇಕಾನಂದ ರಥಯಾತ್ರೆಗೆ ಸಂಬಂಧಪಟ್ಟಂತೆ ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಭಾವ ಪ್ರಚಾರ ಪರಿಷತ್ತಿನ ಸದಸ್ಯರ ಒಂದು ಸಭೆಯನ್ನು ಆಯೋಜಿಸಿ ರಥಯಾತ್ರೆಯ ಬಗ್ಗೆ ಚರ್ಚಿಸಲಾಯಿತು. ತತ್ಪರಿಣಾಮವಾಗಿ ಪೂರ್ವಭಾವಿ ರೂಪರೇಷೆಗಳು ತಕ್ಕಮಟ್ಟಿಗೆ ರೂಪ ತಾಳಿದವು. ಕರ್ನಾಟಕ ರಾಜ್ಯದ ರಾಮಕೃಷ್ಣ ಮಹಾಸಂಘದ ಎಲ್ಲಾ ಶಾಖಾಕೇಂದ್ರಗಳು ಮತ್ತು ಕರ್ನಾಟಕ ರಾಜ್ಯದ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಎಲ್ಲಾ ಸದಸ್ಯ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ರಥಯಾತ್ರೆಯನ್ನು ನಡೆಸುವುದಾಗಿ ನಿರ್ಧರಿಸಲಾಯಿತು.

### ಭಾಗ-೨ : ರಥಯಾತ್ರೆಯ ಉದ್ದೇಶ

ಕರ್ನಾಟಕದ ಯುವಜನತೆಯಲ್ಲೂ, ಎಲ್ಲ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಲ್ಲೂ, ನಗರ ಹಾಗೂ ಗ್ರಾಮಾಂತರ ಪ್ರದೇಶದ ಜನಸಾಮಾನ್ಯರಲ್ಲೂ ವಿವೇಕಾನಂದರ ಋಷಿಸದೃಶಜೀವನ ಮತ್ತು ಲಾಭದಾಯಕ ಚಿಂತನೆಯ ಹಿರಿಮೆಯನ್ನು ತಿಳಿಸಿಕೊಡುವುದು ಈ ರಥಯಾತ್ರೆಯ ಪ್ರಧಾನ ಉದ್ದೇಶವಾಗಿತ್ತು. ಇದಕ್ಕೆ ಸಹಾಯವಾಗಲು ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆ ಶಾರದಾದೇವಿಯವರ ಹಾಗೂ ವೇದಾಂತ ಸಾಹಿತ್ಯವನ್ನು ಪರಿಚಯಿಸುವುದೇ ಮಹದೋದ್ದೇಶವಾಗಿತ್ತು.

### ಭಾಗ-೩ : ರಥಯಾತ್ರೆಯನ್ನು ಯಶಸ್ವಿಗೊಳಿಸಲು ರಾಜ್ಯಾದ್ಯಂತ ಪೂರ್ವಭಾವಿ ಸಭೆ

ಈ ಮೊದಲೇ ತುಮಕೂರಿನಲ್ಲಿ ಭಾವಪ್ರಚಾರ ಪರಿಷತ್ತಿನ ಸದಸ್ಯರ ಒಂದು ಸಭೆ ನಡೆದಿತ್ತು. ಭಾವಪ್ರಚಾರ ಪರಿಷತ್ತಿನ ಕೇಂದ್ರಗಳು ಇಲ್ಲದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಅನ್ಯ ಸಂಸ್ಥೆಗಳ ಸಹಕಾರ ಮತ್ತು ಸಹಾಯವನ್ನು ಬಯಸಿ ರಾಜ್ಯದಲ್ಲಿ ರಥಯಾತ್ರೆಯ ಸ್ವಾಗತ ಸಮಿತಿಯ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತು. ಬಸವನಗುಡಿ ರಾಮಕೃಷ್ಣ ಮಠದ ವತಿಯಿಂದ ಒಂದು ಆಯೋಜಕ ತಂಡ ರಚಿಸಿ ರಾಜ್ಯಾದ್ಯಂತ ರಥಯಾತ್ರೆಯ ಸ್ವಾಗತ ಸಮಿತಿಯ ರಚನೆಗೆ ವಿಶೇಷವಾಗಿ ಗಮನಹರಿಸುವ ವ್ಯವಸ್ಥೆ ಮಾಡಲಾಯಿತು.

### ಭಾಗ-೪ : ರಾಜ್ಯದ ಎಲ್ಲೆಡೆ ರಥಯಾತ್ರಾ ಸ್ವಾಗತ ಸಮಿತಿ ಸ್ಥಾಪನೆ ಮತ್ತು ಕ್ರಿಯಾಶೀಲ ಜವಾಬ್ದಾರಿ

ರಥಯಾತ್ರೆಯ ಸಂಕಲ್ಪ ಮತ್ತು ಉದ್ದೇಶವನ್ನು ಅರ್ಥಪೂರ್ಣವಾಗಿ ಸಾಕಾರಗೊಳಿಸುವುದು ಅತ್ಯಂತ ಗುರುತರ ಹೊಣೆಗಾರಿಕೆ. ಇವು ಕೇವಲ ಒಬ್ಬ ವ್ಯಕ್ತಿಯಿಂದ ಅಥವಾ ಒಂದು ಸಂಸ್ಥೆಯಿಂದ ಪೂರ್ಣಗೊಳ್ಳುವುದಿಲ್ಲ. ಇದಕ್ಕೆ ಜನಬಲ ಮತ್ತು ಹಣಬಲ ಹಾಗೂ ಹೊಣೆಗಾರಿಕೆಯ ದಕ್ಷ ವ್ಯಕ್ತಿಗಳನ್ನು ಒಗ್ಗೂಡಿಸಲು ಬಸವನಗುಡಿ ಆಶ್ರಮದ ಪೂಜ್ಯ ಸ್ವಾಮಿ ಹರ್ಷಾನಂದಜಿ ಮತ್ತು ಸ್ವಾಮಿ ಶಾಂತಿಮಯಾನಂದಜಿಯವರ ಪರಿಶ್ರಮವನ್ನು ಮರೆಯಲಾಗುವುದಿಲ್ಲ.

ಬೆಂಗಳೂರಿನಿಂದ ಹೊರಟ ಆಯೋಜಕ ತಂಡವು ಅನೇಕ ಭಕ್ತರ ಮತ್ತು ಸ್ವಯಂಸೇವಕರ ಸಹಕಾರದೊಂದಿಗೆ ರಾಜ್ಯಾದ್ಯಂತ ಅನೇಕ ಸ್ಥಳಗಳನ್ನು ಭೇಟಿಮಾಡಿತು. ಆ ಊರಿನ ಪ್ರಮುಖರ ಸಭೆಯನ್ನು ಕರೆದು ರಥಯಾತ್ರೆಯ ಬಗ್ಗೆ ವಿವರಿಸಿ, ಜವಾಬ್ದಾರಿಯುತವಾಗಿ ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ತಿಳುವಳಿಕೆ ನೀಡಲಾಯಿತು.

ಪ್ರತಿ ನಗರವನ್ನು ಪ್ರವೇಶಿಸುವಾಗ ಶೋಭಾಯಾತ್ರೆಯ ಮಾರ್ಗಸೂಚಿ ಹಾಗೂ ಅದ್ದೂರಿಯ ಸಂಭ್ರಮದ ರಥಯಾತ್ರೆಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಮವಸ್ತ್ರ ಸಹಿತ ಮತ್ತು ಬ್ಯಾಂಡ್‌ಸೆಟ್‌ನೊಂದಿಗೆ ಸಾಗುವುದು; ಸ್ಥಳೀಯ ಸಾಂಸ್ಕೃತಿಕ ತಂಡಗಳನ್ನು ಜೋಡಿಸುವುದು; ಕುದುರೆಗಳ ಸವಾರಿ, ಗಜರಾಜನ ನಡಿಗೆ, ವೇಷಭೂಷಣಗಳನು ತೊಟ್ಟ ಕಲಾವಿದರ ತಂಡ, ಕಲಾಪ್ರತಿಭೆಗೆ ಅವಕಾಶ, - ಹೀಗೆ ಶೋಭಾಯಾತ್ರೆಯ ತಯಾರಿಯ ಬಗ್ಗೆ ತಿಳಿವಳಿಕೆ, ತದನಂತರ ಅಲ್ಲಿನ ಸ್ಥಳೀಯ ಶೈಕ್ಷಣಿಕ ಸಂಸ್ಥೆಯಿಂದ, ಆರಕ್ಷಕ ಠಾಣೆಯಿಂದ ಅನುಮೋದನೆ ಪತ್ರ ಪಡೆಯುವ ಜವಾಬ್ದಾರಿ; ರಥಯಾತ್ರೆಯ ತಂಡದವರಿಗೆ ಮತ್ತು ಅದರ ವಾಹನಗಳ ನಿಲುಗಡೆಗೆ ವ್ಯವಸ್ಥೆ, ಮುಖ್ಯವಾಗಿ ತಿಂಗಳುಗಟ್ಟಲೆ ರಥದ ಜೊತೆ ಸಂಚರಿಸುವ ರಥದ ಸಿಬ್ಬಂದಿ ಮತ್ತು ಸಂಚಾಲಕರಿಗೆ ಊಟ-ವಸತಿಯ ಜವಾಬ್ದಾರಿ, ರಾಮಕೃಷ್ಣ-ವಿವೇಕಾನಂದ ಸಾಹಿತ್ಯ ಪ್ರಚಾರಕ್ಕೆ ವ್ಯವಸ್ಥೆ, ಕೊನೆಗೆ ಸಭಾಕಾರ್ಯಕ್ರಮದ ಬಗ್ಗೆ ತಿಳುವಳಿಕೆ, ಸಭಿಕರು ಯುವಕರಾಗಿಯೇ ಇರಬೇಕು, ವಿವೇಕಾನಂದರ ತತ್ತ್ವ- ಸಂದೇಶಗಳು ಕರ್ನಾಟಕದ ಯುವಕರ ಆತ್ಮಜಾಗೃತಿಗಾಗಿಯೇ ಇರುವುದರಿಂದ ಆ ನಿಟ್ಟಿನಲ್ಲಿ ವಿವರಿಸಲಾಯಿತು.

### ಭಾಗ-೫ : ರಥೋತ್ಸವದ ಸಭಾಕಾರ್ಯಕ್ರಮ

ಸಭಾಮಂಟಪವು ಆ ಊರಿನ ಅಥವಾ ನಗರದ ರಥಯಾತ್ರೆಯ ಪರಿಶ್ರಮದ ಫಲವಾಗಿರುತ್ತದೆ. ಶೋಭಾಯಾತ್ರೆಯು ಪ್ರದರ್ಶನದ ಮೂಲಕ ಪ್ರಚಾರ ಮಾಡುವುದಾಗಿರುತ್ತದೆ. ಆದರೆ ಈ ಸಭೆಯಲ್ಲಿ ಭಾಗವಹಿಸುವವರು ನಾವು ಉದ್ದೇಶಿಸಿದ ಯುವಸಮೂಹವಾಗಿರುತ್ತದೆ. ಸಭೆಯಲ್ಲಿ ವೇದಿಕೆಯ ಮೇಲೆ ಸಮಾಜದ ಗಣ್ಯರ ಜೊತೆ ವಾಗ್ಮಿಗಳು, ರಾಜಕೀಯ ನಾಯಕರು, ದಾನಿಗಳು, ಸರ್ಕಾರಿ ಅಧಿಕಾರಿಗಳು ಇರುತ್ತಾರೆ. ಇದರ ಜೊತೆಗೆ ಸಾಹಿತ್ಯ ಭಂಡಾರದ ಮಾರಾಟಕ್ಕೆ ಅನುಕೂಲಕರವಾದ ವಿತರಣೆಯನ್ನು ಗಮನದಲ್ಲಿಟ್ಟು ವ್ಯವಹರಿಸಬೇಕೆಂದು ತಿಳಿಯಪಡಿಸಲಾಯಿತು.

ಸಭೆಯ ಬಗ್ಗೆ ಜಾಹೀರಾತು, ಅತಿಥಿಗಳ ಆಹ್ವಾನ, ಸಭಾ ಮಂಟಪದ ರಚನೆ, ವೇದಿಕೆಯ ನಿರ್ಮಾಣ, ಯುವಜನತೆಗೆ ಸಂದೇಶ, ಉಚಿತ ಸಾಹಿತ್ಯ ವಿತರಣೆ, ಸಭಿಕರಿಗೆ ಉಪಹಾರದ ವ್ಯವಸ್ಥೆ, ಇದೆಲ್ಲ ಜವಾಬ್ದಾರಿಯನ್ನು ರಥಯಾತ್ರೆಯ ಸ್ವಾಗತ ಸಮಿತಿಯ ಹೊಣೆಯಾಗಿರುತ್ತದೆ, ಆರ್ಥಿಕ ನೆರವಿನಿಂದ ಹಿಡಿದು ಉಳಿದ ಎಲ್ಲಾ ರೀತಿಯ ಕಾರ್ಯ ನಿರ್ವಹಿಸುವಂತೆ ಮಾಡಬೇಕೆಂದು, ಜೊತೆಗೆ ರಾಮಕೃಷ್ಣ-ವಿವೇಕಾನಂದರ ಭಾವಪ್ರಚಾರ ವಿವಿಧ ರೀತಿಯಲ್ಲಿ ಜನರಿಗೆ ಲಾಭವಾಗುವಂತೆ ಶ್ರಮಿಸಬೇಕೆಂದು ತಿಳಿಸಲಾಯಿತು.

### ಭಾಗ-೬ : ರಥಯಾತ್ರೆಗೆ ಸಹಕರಿಸಿದ ಅನ್ಯ ಸಂಘ ಸಂಸ್ಥೆಗಳು ಮತ್ತು ಧಾರ್ಮಿಕ ಆಶ್ರಮಗಳು

ರಥೋತ್ಸವದಲ್ಲಿ ಸ್ಥಳೀಯ ಮಠಮಾನ್ಯಗಳ ಮತ್ತು ಧಾರ್ಮಿಕ ಸಂಸ್ಥೆಗಳ ಪಾತ್ರ ಬಹಳ ಹಿರಿದಾದದ್ದು. ಅನೇಕ ಶೈಕ್ಷಣಿಕ ಸಂಸ್ಥೆಗಳು, ದೇಶಭಕ್ತ ಸಂಘಟನೆಗಳು, ರಥೋತ್ಸವಕ್ಕೆ ಬಹಳ ಸ್ಫೂರ್ತಿದಾಯಕವಾಗಿ ಸಹಕರಿಸಿವೆ. ಕೆಲವನ್ನು ನಾವು ಸ್ಮರಿಸಲೇಬೇಕು:

★ **ಮೊದಲನೆಯದಾಗಿ ಪ್ರತಿಷ್ಠಿತ ಆದಿ ಚುಂಚನಗಿರಿ ಶ್ರೀ ಕ್ಷೇತ್ರ ಮತ್ತು ಅದರ ಶಾಖಾ ಕೇಂದ್ರಗಳು**

ಆದಿಚುಂಚನಗಿರಿಯ ಪ್ರಮುಖ ಸ್ವಾಮಿಗಳಾದ ಶ್ರೀ ಶ್ರೀ ನಿರ್ಮಲನಾಥಾನಂದ ಸ್ವಾಮಿಗಳನ್ನು ಭೇಟಿಮಾಡಿ, ಈ ರಥೋತ್ಸವದ ಬಗ್ಗೆ ತಿಳಿಸಿದಾಗ, ಅವರು ನಮ್ಮ ಮನವಿಗೆ ಒಪ್ಪಿ ಸಹಕರಿಸುವುದಾಗಿ ಹೇಳಿ, ತಮ್ಮ ಎಲ್ಲಾ ಶಾಖಾ ಕೇಂದ್ರಗಳಿಗೆ ಒಂದು ಅಧಿಕೃತ ಪತ್ರವನ್ನು ಕೊಟ್ಟರು. ಅವರ ಕೇಂದ್ರಗಳಿರುವ ನಗರ ಅಥವಾ ಪಟ್ಟಣದಲ್ಲಿ ವಿವೇಕಾನಂದ ರಥಯಾತ್ರೆಗೆ ತಮ್ಮ ಶೈಕ್ಷಣಿಕ ಕೇಂದ್ರದ ವಿದ್ಯಾರ್ಥಿಗಳು ಸಮವಸ್ತ್ರದೊಂದಿಗೆ ಮತ್ತು ಶಾಲಾ ಬ್ಯಾಂಡ್‌ಸೆಟ್ ಸಮೇತ ಮೆರವಣಿಗೆಯಲ್ಲಿ ಸಹಕರಿಸುವಂತೆ, ರಥಯಾತ್ರಾ ಸಿಬ್ಬಂದಿಗಳಿಗೆ ಊಟ, ವಸತಿಯ ವ್ಯವಸ್ಥೆಗೆ ಅನುಕೂಲ ಮಾಡುವಂತೆ ವ್ಯವಸ್ಥೆಗೊಳಿಸಿದರು. ನಾವು ಸಹ ಅವರ ಈ ಸಹಕಾರದ ಸಂಪೂರ್ಣ ಉಪಯೋಗವನ್ನು ಪಡೆದವು ಕೋಲಾರ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಶಿವಮೊಗ್ಗ ಶ್ರೀಕ್ಷೇತ್ರ ಹೀಗೆ ಹತ್ತು ಹಲವು ಕಡೆ ನಮಗೆ ಅವರ ಸಹಾಯವು ವರವಾಗಿ ಪರಿಣಮಿಸಿತು.

★ **ಧರ್ಮಸ್ಥಳದ ಮಂಜುನಾಥ ಸನ್ನಿಧಿಯಲ್ಲಿ**, ಧರ್ಮಸ್ಥಳದ ದೇವಾಲಯದ ಕಡೆಯಿಂದ ಅತಿಥಿ ಸತ್ಕಾರದ ಜೊತೆಗೆ ರಥೋತ್ಸವವನ್ನು ನಡೆಸಿಕೊಟ್ಟರು ಮತ್ತು ಊಟ ವಸತಿಯ ಅನುಕೂಲವನ್ನು ಮಾಡಿದರು.

★ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ **ವೀರಶೈವ ಮಠ**ಗಳು ನಮ್ಮ ರಥೋತ್ಸವದಲ್ಲಿ ಎಲ್ಲಾ ತರಹದ ಅನುಕೂಲತೆಗಳ ಜೊತೆಗೆ, ನಮ್ಮೊಡನೆ ಬಹಳ ಆತ್ಮೀಯವಾಗಿ ನಡೆದುಕೊಂಡರು ಹಾಗೂ ಅನೇಕ ಕಡೆ ಸಭಾ ಕಾರ್ಯಕ್ರಮದಲ್ಲಿ ಸಹ ಭಾಗವಹಿಸಿದರು.

★ **ಸತ್ಯಸಾಯಿ ಸಂಸ್ಥೆಗಳು** ಮತ್ತು ವಿವೇಕಾನಂದರ ಹೆಸರಿನಲ್ಲಿ ನಡೆಸುವ ಕೆಲವು ಸೇವಾ ಸಂಘಗಳು ರಥೋತ್ಸವದಲ್ಲಿ ಭಾಗಿಯಾಗಿ ಬಹಳಷ್ಟು ಶ್ರಮಿಸಿದ್ದಾರೆ.

★ **ರಾಯಚೂರು ಜಿಲ್ಲೆ**ಯ ಸಿಂಧನೂರಿನಲ್ಲಿ ವಕೀಲರಾದ ಸನ್ಮಾನ್ಯ ಶ್ರೀ ವೀರೇಶ್ ಯಲ್ಲೂರ್ ಅವರ ನೇತೃತ್ವದಲ್ಲಿ ಬಹಳ ವಿಜೃಂಭಣೆಯಿಂದ ರಥೋತ್ಸವ ನಡೆಯಿತು. ಪತಂಜಲಿಯೋಗ ಸಂಸ್ಥೆಗಳು, ಬಂಗಾಳದಿಂದ ಬಂದು ನೆಲೆಸಿರುವ ನಿರಾಶ್ರಿತ ಕ್ಯಾಂಪ್‌ನ ಭಕ್ತರ ಸಮೂಹ ಜೊತೆಗೆ ಅಲ್ಲಿನ ಮುಸ್ಲಿಂ ಬಾಂಧವರು ರಸ್ತೆಯ ಪಕ್ಕದಲ್ಲಿ ವಿವೇಕಾನಂದ ರಥಯಾತ್ರೆಗೆ ದೇಣಿಗೆಯನ್ನು ಕೊಟ್ಟು ಶುಭಹಾರೈಸುವ ದೊಡ್ಡ ದೊಡ್ಡ ಫಲಕಗಳು ರಾರಾಜಿಸುತ್ತಿದ್ದವು ಹಾಗೂ ಮೆರವಣಿಗೆಯಲ್ಲಿ ಭಾಗವಹಿಸಿದರು.

★ ಅಥಣಿಯಲ್ಲಿ ರಾಜಕೀಯದ ಎಲ್ಲಾ ಪಕ್ಷದವರು, ಜನಸಾಮಾನ್ಯರು ಮತ್ತು ರಂಜಾನ್ ಪ್ರಾರ್ಥನೆ ಮುಗಿಸಿ, ರಥಯಾತ್ರೆಯಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಂಡರು. ದೇಶಭಕ್ತ ಸಂಘಟನೆಗಳು ಎಲ್ಲರೂ ಸೇರಿ ಬಹಳ ವಿಶೇಷ ರೀತಿಯಲ್ಲಿ ವಿವೇಕಾನಂದ ರಥಯಾತ್ರೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು.

★ **ರಥೋತ್ಸವಕ್ಕೆ ಪೋಲೀಸ್ ಇಲಾಖೆಯ ಸಹಕಾರ**

ಚಿಕ್ಕಬಳ್ಳಾಪುರದಲ್ಲಿ ನಡೆದ ರಥಯಾತ್ರೆಯಲ್ಲಿ ಪೋಲೀಸ್ ಇಲಾಖೆಯಿಂದ ಭವ್ಯವಾದ ಸ್ವಾಗತ, ಸಮವಸ್ತ್ರದೊಂದಿಗೆ ಕವಾಯತ್, ಟರ್ಬನ್ ಧರಿಸಿದ ಪೋಲೀಸ್‌ಪಡೆ ರಥೋತ್ಸವಕ್ಕೆ ಮೆರೆಗು ಕೊಟ್ಟಿತ್ತು. ಪೋಲೀಸ್ ಬ್ಯಾಂಡ್‌ಸೆಟ್ ಸಹ ಭಾಗವಹಿಸುವುದರ ಮೂಲಕ ರಥಯಾತ್ರೆಯ ಮಹತ್ವ ಹೆಚ್ಚಿತು.

ಬಳ್ಳಾರಿ ನಗರದಲ್ಲಿ ಪೋಲೀಸ್ ಇಲಾಖೆಯಿಂದ ಮೋಟರ್ ಸೈಕಲ್ ರ್‍ಯಾಲಿಯನ್ನು ಏರ್ಪಡಿಸಿ ಬಳ್ಳಾರಿ ನಗರದಲ್ಲಿ ವಿವೇಕಾನಂದ ರಥಯಾತ್ರೆಯ ಗರಿಮೆಯನ್ನು ಉತ್ತಮಗೊಳಿಸಿದರು.

ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಆರಕ್ಷಕ ಇಲಾಖೆಯ ಎಸ್ಕಾರ್ಟ್‌ನೊಂದಿಗೆ ಸೊಗಸಾಗಿ ಎಲ್ಲಾ ತಾಲೂಕುಗಳಲ್ಲೂ ಬಹಳ ಗೌರವಾದರಗಳಿಂದ ರಥೋತ್ಸವ ಸಾಗಿತು.

### ಭಾಗ-೭ : ವಿಶಿಷ್ಟ ರೀತಿಯಲ್ಲಿ ಮಂಗಳೂರಿನ ರಥೋತ್ಸವ

ಮಂಗಳೂರಿನಲ್ಲಿ ನಡೆದ ರಥೋತ್ಸವವು ಧರ್ಮಸಮನ್ವಯಾಚಾರ್ಯರಾದ ಶ್ರೀರಾಮಕೃಷ್ಣ ಉಪದೇಶಕ್ಕನುಗುಣವಾಗಿತ್ತು. ಈ ನಗರದಲ್ಲಿ ಹಿಂದೂಗಳು, ಕ್ರಿಶ್ಚಿಯನ್ ಧರ್ಮದವರು ಮತ್ತು ಇಸ್ಲಾಂ ಧರ್ಮೀಯರು ಅನೇಕ ವಿವಿಧ ಭಾರತೀಯ ಪರಂಪರೆಯ ಸಂಘಟನೆಗಳು ಮತ್ತು ಎಲ್ಲಾ ರಾಜಕೀಯ ಪಕ್ಷದವರು ಒಟ್ಟಿಗೆ ಸೇರಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಬಹಳ ವಿಜೃಂಭಣೆಯಿಂದ ಕಾರ್ಯಕ್ರಮಗಳನ್ನು ನೆರವೇರಿಸಿಕೊಟ್ಟರು. ಬೆಳಿಗ್ಗೆ ಮತ್ತು ಸಂಜೆ




ಎರಡು ಬಾರಿ ಮೆರವಣಿಗೆ ಮತ್ತು ಎರಡು ಸಭಾ ಕಾರ್ಯಕ್ರಮಗಳನ್ನು ನಡೆಸಿದರು. ಶೋಭಾಯಾತ್ರೆಯ ರಥದೊಂದಿಗೆ ಅನೇಕ ಶಾಲಾ-ಕಾಲೇಜಿನ ವಿದ್ಯಾರ್ಥಿಗಳೊಡನೆ ಚರ್ಚಿನ ಫಾದರ್ ಮತ್ತು ಚರ್ಚಿನ ಸೋದರಿಯರು ಹಾಗೂ ಮುಸ್ಲಿಂ ಯುವಕರ ಕವ್ವಾಲಿ ತಂಡ ಮೆರವಣಿಗೆಗೆ ಮೆರಗು ಕೊಟ್ಟವು.

### ಭಾಗ-೮ : ರಾಷ್ಟ್ರಜಾಗೃತಿ ಮತ್ತು ವಿದ್ಯುತ್‌ವಾಣಿ ಪುಸ್ತಕದ ಉಚಿತ ವಿತರಣೆ ಹಾಗೂ ಪುಸ್ತಕ ಮಾರಾಟ

ಪ್ರತಿಯೊಂದು ನಗರ ಮತ್ತು ಪಟ್ಟಣದಲ್ಲಿ ಸಭಾಕಾರ್ಯಕ್ರಮ ಇರುವುದು ಅತ್ಯಂತ ಸಹಜವಾಗಿತ್ತು ಸುಮಾರು ೨೮೨ ಸಭಾ

ಕಾರ್ಯಕ್ರಮಗಳನ್ನು ನಡೆಸಲಾಯಿತು. ಕೆಲವು ಕಡೆ ಮಾತ್ರ ಕೇವಲ ಮೆರವಣಿಗೆ (ಶೋಭಾಯಾತ್ರೆ)ಗೆ ಸೀಮಿತಿವಾಗಿರುತ್ತಿದ್ದವು. ಬಹಳಷ್ಟು ಕಡೆ ಮೆರವಣಿಗೆಗೆ ಶಾಲಾ ವಿದ್ಯಾರ್ಥಿಗಳು, ಸಭಾ ಕಾರ್ಯಕ್ರಮಕ್ಕೆ ಕಾಲೇಜಿನ ಯುವಕರನ್ನೇ ಸಭಿಕರನ್ನಾಗಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಹೀಗೆ ನಮ್ಮ ವಿವೇಕ ಚಿಂತನ ಸಭೆಯಲ್ಲಿ ಭಾಗವಹಿಸಿದ ಯುವ ಸಮೂಹ ಬಹಳ ಉತ್ತಮ ಮಟ್ಟದಾಗಿತ್ತು ಇವರಿಗೆ 'ವಿದ್ಯುತ್‌ವಾಣಿ' ಪುಸ್ತಕ ಮತ್ತು 'ರಾಷ್ಟ್ರಜಾಗೃತಿ' ಪುಸ್ತಕವನ್ನು ವಿತರಿಸಲಾಯಿತು. ಒಟ್ಟು ಮೂರು ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಕೊಡುಗೆಯಾಗಿ ಯುವಕರಿಗೆ ಹಂಚಲಾಯಿತು.

ಪ್ರತಿಯೊಂದು ಯುವಸಮಾವೇಶದಲ್ಲಿ ಮತ್ತು ಸಾರ್ವಜನಿಕ ಸಭೆಯಲ್ಲಿ ಪುಸ್ತಕ ಮಾರಾಟ ಮಳಿಗೆಯ ಪ್ರದರ್ಶನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸುಮಾರು ೯ ತಿಂಗಳ ಈ ಪ್ರವಾಸದಲ್ಲಿ ೨೬ ಲಕ್ಷ ಮೌಲ್ಯದ ಪುಸ್ತಕ ಕೇವಲ ಯುವಕರಿಗಾಗಿ ಮಾರಾಟವಾಗಿತ್ತು.

ವಿದ್ಯುತ್‌ವಾಣಿ ಪುಸ್ತಕವನ್ನು ಕರ್ನಾಟಕ ಸರ್ಕಾರದ ಯುವ ಜನಸೇವಾ ಇಲಾಖೆಯಿಂದ ಅಚ್ಚು ಹಾಕಿಸಿ ಉಚಿತವಾಗಿ ಹಂಚಲಾಯಿತು ಹಾಗೂ ವಿವೇಕಾನಂದರ ಭಾವಚಿತ್ರವಿರುವ ಟೀ ಶರ್ಟ್‌ಗಳನ್ನು ಸಹ ಯುವಕರಿಗೆ ವಿತರಿಸಲಾಯಿತು. ಇದು ಸರ್ಕಾರದ ವತಿಯಿಂದ ಬಂದ ಕೊಡುಗೆಯಾಗಿತ್ತು.

### ಭಾಗ-೯ : ಮೈಸೂರು ಜಿಲ್ಲೆಯ ವಿವೇಕಾನಂದ ರಥಯಾತ್ರೆ

ಮೈಸೂರು ರಾಮಕೃಷ್ಣಶ್ರಮದ ವತಿಯಿಂದ, ಮೈಸೂರು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಬಹಳ ಅದ್ದೂರಿಯ ರಥಯಾತ್ರೆಯನ್ನು ಆಯೋಜಿಸಲಾಗಿತ್ತು, ಹಾಗೂ ಪಕ್ಕದ ಚಾಮರಾಜನಗರ ಜಿಲ್ಲೆಯ ಮತ್ತು ಮಂಡ್ಯ ಜಿಲ್ಲೆಯ ಕೆಲವು ಕಡೆ ರಥಯಾತ್ರೆ ಆಯೋಜನೆಯ ಜವಾಬ್ದಾರಿಯನ್ನು ಸಹ ನಿರ್ವಹಿಸಿದರು.

ಮೈಸೂರು ಒಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ತಾಣವೆಂದು ಹೆಗ್ಗಳಿಕೆಯನ್ನು ಪಡೆದಿದೆ. ಈ ಮೈಸೂರು ನಗರದ ವಿವೇಕಾನಂದ ರಥಯಾತ್ರೆಯು ಬಹಳ ವಿಶೇಷವೇ ಆಗಿತ್ತು. ಮೈಸೂರು ನಗರದಲ್ಲಿ ಒಂದೇ ದಿನದಲ್ಲಿ ಬಹಳ ಅದ್ದೂರಿಯ ಮೂರು ಕಾರ್ಯಕ್ರಮಗಳು ನಡೆದವು ಇದರ ಯಶಸ್ಸು ಮೈಸೂರು ಆಶ್ರಮದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಮುಕ್ತಿದಾನಂಜಿಯವರಿಗೆ ಸಲ್ಲುತ್ತದೆ.

ಮೈಸೂರಿನ ಹೆಸರಾಂತ ಅರಮನೆಯ ಉತ್ತರ ಮಹಾದ್ವಾರದ ಬಲಪಾರ್ಶ್ವದಲ್ಲಿ ರಥಯಾತ್ರೆಯ ಉದ್ಘಾಟನಾ ವೇದಿಕೆಯನ್ನು ಸಿದ್ದಪಡಿಸಲಾಗಿತ್ತು. ಅನೇಕ ಜನ, ಸಾಧುಸಂನ್ಯಾಸಿಗಳ ಜೊತೆಗೆ ಮೈಸೂರಿನ ಗಣ್ಯಮಾನ್ಯರನ್ನು ಆಹ್ವಾನಿಸಿದ್ದರು. ಸುತ್ತೂರಿನ ಧಾರ್ಮಿಕ ಸಂಸ್ಥೆಯ ಪ್ರಮುಖ ಸ್ವಾಮಿಗಳನ್ನು ಮತ್ತು ಶ್ರೀ ಆದಿ ಚುಂಚನಗಿರಿ ಮೈಸೂರಿನ ಶಾಖಾಮಠದ ಸ್ವಾಮಿಗಳನ್ನು ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಬಹಳ ಸೊಗಸಾದ ರೀತಿಯಲ್ಲಿ ಉದ್ಘಾಟನೆಯ ಕಾರ್ಯಕ್ರಮ ನೆರವೇರಿತು.

ಅರಮನೆಯ ಉತ್ತರ ಮಹಾದ್ವಾರದ ಬಳಿ ಅಲಂಕೃತಗೊಂಡ ಪೋಲೀಸ್ ಸಮವಸ್ತ್ರಧಾರಿಗಳು ಕುದುರೆಗಳ ಮೇಲೆ ಬಂದು




ಸಾಲಾಗಿ ನಿಂತಿದ್ದರು. ಅರಮನೆಯ ಒಳ ಮೈದಾನದಿಂದ ನಿಧಾನವಾಗಿ ನಮ್ಮ ವಿವೇಕಾನಂದ ರಥಯಾತ್ರೆಗೆ ಅವರದೇ ಆದ ರೀತಿಯಲ್ಲಿ ಸೇರ್ಪಡೆಗೊಂಡರು ಅದೊಂದು ಅದ್ಭುತವಾದ ಮನೋಹರ ದೃಶ್ಯವಾಗಿತ್ತು. ಈ ಸಮಾರಂಭಕ್ಕೆ ಸಾಗರದೋಪಾದಿಯಲ್ಲಿ ಜನಸ್ತೋಮ ಹಾಗೂ ಅನೇಕ ಶಾಲಾ ಕಾಲೇಜಿನ ವಿದ್ಯಾರ್ಥಿಗಳ ಸಮೂಹ ಸೇರಿತ್ತು. ಇಲ್ಲಿಂದ ಪ್ರಾರಂಭವಾದ ಶೋಭಾಯಾತ್ರೆ ಮೈಸೂರಿನ ಗಡಿಯಾರ ಕಂಬದ ಮುಖಾಂತರ ನಗರದ ಪ್ರಮುಖ ಪ್ರತಿಷ್ಠಿತ ಬೀದಿಗಳಲ್ಲಿ ಸಾಗಿತು.

ರಥಯಾತ್ರೆಗೆ ಮೆರಗು ನೀಡಲು ವಿವಿಧ ರೀತಿಯ ಕಲಾತಂಡಗಳು ಸೇರ್ಪಡೆಯಾದವು. ಉದಾಹರಣೆಗೆ: ಡೊಳ್ಳು ಕುಣಿತ, ಹಾಗೂ ಅನೇಕ ಸಾಂಸ್ಕೃತಿಕ ಕಲಾ ತಂಡಗಳು. ಎರಡನೇ ಕಾರ್ಯಕ್ರಮವು ವಿವೇಕಾನಂದರು ಮೈಸೂರಿಗೆ ಬಂದಾಗ ಉಳಿದುಕೊಂಡಿದ್ದ ನಿರಂಜನ ಮಠದ ಪಕ್ಕದಲ್ಲಿ ಜರುಗಿತು. ತದನಂತರ ಮೈಸೂರಿನ ವಿಶ್ವವಿದ್ಯಾನಿಲಯದ ಸಮೀಪ ಪೂರ್ಣಗೊಂಡು ಅಂದಿನ ಸಂಜೆಯ ಕಾರ್ಯಕ್ರಮದಲ್ಲಿ ಕೊನೆಗೊಂಡಿತು.

ಸಂಜೆಯ ಸಭಾಕಾರ್ಯಕ್ರಮ ಬಹಳ ರೋಚಕವಾಗಿತ್ತು. ನವೆಂಬರ್ ತಿಂಗಳಾದ್ದರಿಂದ ಮೈಸೂರಿನಲ್ಲಿ ಸರ್ಕಾರದ ವತಿಯಿಂದ ಕನ್ನಡ ರಾಜ್ಯೋತ್ಸವಕ್ಕೆ ಒಂದು ವಿಶಾಲವಾದ ಸಭಾಮಂಟಪ ಬಹಳ ಅದ್ದೂರಿಯಿಂದ ಅಲಂಕೃತಗೊಂಡು ಬಹಳ ಸುಸಜ್ಜಿತವಾಗಿತ್ತು.

ಮೈಸೂರು ರಾಮಕೃಷ್ಣಶ್ರಮದ ಸ್ವಾಮಿಗಳು ಈ ಸಭಾ ಮಂಟಪದ ಆಡಳಿತಾಧಿಕಾರಿಗಳ ಅಪ್ಪಣೆ ಪಡೆದು ಈ ಬೃಹತ್ ವೇದಿಕೆಯಲ್ಲಿ ವಿವೇಕನಾಂದ ರಥೋತ್ಸವದ ಸಭಾ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅಂದು ಸಂಜೆ ಸಭಿಕರಾಗಿ ನಗರದ ಸಾರ್ವಜನಿಕರು, ನೂರಾರು ಭಕ್ತರು, ವಿದ್ಯಾರ್ಥಿಗಳ ಸಮೂಹದಿಂದ ಸಭೆ ಅಲಂಕೃತವಾಗಿತ್ತು. ಸಭಾವೇದಿಕೆಯ ಮೇಲೆ ಪ್ರತಿಷ್ಠಿತ ವ್ಯಕ್ತಿಗಳು, ವಾಗ್ಮಿಗಳು, ಕಲಾವಿದರು ಮತ್ತು ಆದಿಚುಂಚನಗಿರಿ ಶ್ರೀಕ್ಷೇತ್ರದ ಪ್ರಮುಖ ಸ್ವಾಮಿಗಳು ಉಪಸ್ಥಿತರಿದ್ದರು. ಅವರು ಮಾಡಿದ ವಿವೇಕಾನಂದರನ್ನು ಕುರಿತ ಭಾಷಣ ಅದ್ಭುತವಾಗಿತ್ತು. ಈ ರೀತಿ ಒಂದೇ ದಿನದಲ್ಲಿ ಅರಮನೆಯ ಹತ್ತಿರ ಮತ್ತು ನಿರಂಜನ ಮಠದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ಬಳಿ ಬೃಹತ್ ಸಮ್ಮೇಳನಗಳನ್ನು ನಡೆಸಿದ ಕೀರ್ತಿ ಮೈಸೂರು ಆಶ್ರಮದ ಅಧ್ಯಕ್ಷರಿಗೆ ಸಲ್ಲುತ್ತದೆ.

ಮೈಸೂರು ಆಶ್ರಮದವತಿಯಿಂದ ಪಿರಿಯಾಪಟ್ಟಣ, ಕೆ.ಆರ್. ನಗರ, ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಮತ್ತು ಮಂಡ್ಯದಲ್ಲಿಯೂ ರಥಯಾತ್ರೆಯನ್ನು ಆಯೋಜಿಸಲಾಗಿತ್ತು. ಸಾರ್ಥಕ ರೂಪದಲ್ಲಿ ರಥಯಾತ್ರೆಯನ್ನು ಆಚರಿಸಿ, ಅನುಕೂಲ ಮಾಡಿಕೊಟ್ಟ 'ಜ್ಞಾನವಾಹಿನಿ'ಯ ಮುಖ್ಯಸ್ಥರಾಗಿದ್ದ ಮತ್ತು 'ವಿವೇಕಪ್ರಭ' ಸಂಪಾದಕರಾಗಿದ್ದ ಸ್ವಾಮಿ ವೀರೇಶಾನಂದರನ್ನು ಇಲ್ಲಿ ಮರೆಯುವಂತಿಲ್ಲ.

## ಭಾಗ-೧೦: ಗದಗ-ಬೆಟಗೇರಿಯ ರಥಯಾತ್ರೆಯ ವಿಶೇಷತೆಗಳು

ಗದಗ ನಗರದಲ್ಲಿ ಮತ್ತು ಬೆಟಗೇರಿ - ಇಲ್ಲಿ ವಿವೇಕಾನಂದರ ೧೫೦ನೇ ಹುಟ್ಟುಹಬ್ಬದ ಪ್ರಯುಕ್ತ ಸುಮಾರು ೧೫೦ ಮಕ್ಕಳಿಗೆ ವಿವೇಕಾನಂದರ ವೇಷಾಲಂಕಾರ ಮಾಡಿ, ಲಾರಿಗಳ ಮೇಲೆ ಅವರಿಗೆಲ್ಲ ಪ್ರದರ್ಶನಕ್ಕೆ ವ್ಯವಸ್ಥೆಯನ್ನು ಮಾಡಿ ವಿಜೃಂಭಣೆಯ ಮೆರವಣಿಗೆಯನ್ನು ಮತ್ತು ಗಜರಾಜನ ಸಮೇತ (ಅಲಂಕೃತವಾದ ಆನೆ) ಮೆರವಣಿಗೆಯಲ್ಲಿ ಭಾಗವಹಿಸುವಂತೆ ಮಾಡಿದುದು ವಿಶೇಷ ಮತ್ತು ಅದ್ಭುತವಾಗಿತ್ತು. ರಾಮಕೃಷ್ಣಾಶ್ರಮದ ಭಕ್ತರಾದ ಸನ್ಮಾನ್ಯ ಡಿ.ಆರ್.ಪಾಟೀಲರು ಈ ಎಲ್ಲಾ ವ್ಯವಸ್ಥೆಯ ಜೊತೆಗೆ ಬೇರೆ ಬೇರೆ ಜಿಲ್ಲೆಯ ಜವಾಬ್ದಾರಿಯುತ ವ್ಯಕ್ತಿಗಳ ಸಂಪರ್ಕವನ್ನು ಮಾಡಿಸಿಕೊಟ್ಟಿದ್ದರು. ಅವರ ಅವಿಸ್ಮರಣೀಯವಾದ ಸೇವೆಯನ್ನು ಇಲ್ಲಿ ವಿಶೇಷವಾಗಿ ನೆನೆಯಬೇಕಾಗಿದೆ. ಅವರು ಗದಗ ನಗರದಲ್ಲಿ ಸ್ಥಳೀಯ ಪಾರಂಪರಿಕ ಮಠದ ಪೀಠಾಪತಿಗಳನ್ನು, ಇತರ ಘನವೆತ್ತ ಸ್ವಾಮಿಗಳನ್ನು ಹಾಗೂ ಪ್ರತಿಭಾವಂತರನ್ನು ಆಹ್ವಾನಿಸಿ ಒಂದು ಬೃಹತ್ ಸಭೆಯನ್ನೇ ಏರ್ಪಡಿಸಿ ವಿವೇಕಾನಂದರ ಚಿಂತನೆಯನ್ನು ಪ್ರಚಾರಮಾಡಲು ಶ್ರಮಿಸಿದರು. ಅಲ್ಲಿ ಒಳ್ಳೆಯ ಪುಸ್ತಕ ಮಾರಾಟ ಕೂಡ ಸಾಧ್ಯವಾಯಿತು.

## ಭಾಗ-೧೧ : ವಿವೇಕಾನಂದ ರಥಯಾತ್ರೆಯಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಪರಿಷತ್ತಿನ ಪಾತ್ರ

ವಿವೇಕಾನಂದ ರಥಯಾತ್ರೆಯಲ್ಲಿ ಕರ್ನಾಟಕ ಭಾವಪ್ರಚಾರ ಪರಿಷತ್ತಿನ ಕೇಂದ್ರದ ಸಹಭಾಗಿತ್ವವು ಬಹಳ ಅವಿಸ್ಮರಣೆಯ, ಸ್ವಾಮೀಜಿಗಳು ನಡೆಸುವ ಆಶ್ರಮಗಳು, ಭಕ್ತರು ನಡೆಸುವ ಕೇಂದ್ರಗಳು ಮತ್ತು ಸಂನ್ಯಾಸಿನಿ ಮಾತಾಜಿಯವರುಗಳ ಶಾರದಾಶ್ರಮಗಳು ರಥಯಾತ್ರೆಯನ್ನು ಸಫಲಗೊಳಿಸಲು ಸಕ್ರಿಯವಾಗಿ ಶ್ರಮಿಸಿ







ದರು. ಈ ಮೂಲಕ ಕರ್ನಾಟಕದ ರಥಯಾತ್ರೆಯ ಯಶಸ್ಸಿಗೆ ದಕ್ಷ ಸಹಾಯಹಸ್ತವನ್ನು ನೀಡಿ, ಅದರ ಯಶಸ್ಸಿಗೆ ಪ್ರಮುಖ ಕಾರಣೀಭೂತರಾದರು. ತುಮಕೂರು ಆಶ್ರಮದ ಸ್ವಾಮೀಜಿಯವರಾದ ಸ್ವಾಮಿ ವೀರೇಶಾನಂದ ಸರಸ್ವತಿ ಮಹಾರಾಜರು ತುಮಕೂರು ಜಿಲ್ಲೆಯ ಕೆಲವು ತಾಲೂಕು ಕೇಂದ್ರದಲ್ಲಿ, ದೊಡ್ಡಬಳ್ಳಾಪುರದ ಜಿಲ್ಲೆಯ ಕೆಲವು ಕಡೆ, ರಾಮನಗರ ಜಿಲ್ಲೆಯ ಕುದೂರು ಮತ್ತು ಚಿತ್ರದುರ್ಗದಲ್ಲಿ ಕಾರ್ಯೋನ್ಮುಖರಾಗಿ, ತಮ್ಮ ಪೂರ್ಣಪ್ರಮಾಣದ ಸಹಕಾರವನ್ನು ನೀಡಿದರು. ಕಲಬುರ್ಗಿ ಜಿಲ್ಲೆಯ ಪೂರ್ಣ ಜವಾಬ್ದಾರಿಯನ್ನು ಸ್ವಾಮಿ ಮಹೇಶ್ವರಾನಂದಜಿಯವರು ವಹಿಸಿದರು. ಬೀದರ್ ಜಿಲ್ಲೆಯಲ್ಲಿ ಸ್ವಾಮಿ ಜ್ಯೋತಿರ್ಮಯಾನಂದಜಿ ಸಹಕರಿಸಿದರು. ಎಲ್ಲಾ ಸ್ವಾಮೀಜಿಯವರು ಅವರವರ ಕಾರ್ಯಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಿಂದ ತಮ್ಮ ಸಹಕಾರವನ್ನು ನೀಡಿದ್ದಾರೆ. ಭಕ್ತರು ನಡೆಸುವ ಭಾವಪ್ರಚಾರ ಕೇಂದ್ರಗಳು ಸಹ ಎಲ್ಲೆಲ್ಲಿ ಅವರವರ ಜವಾಬ್ದಾರಿಯನ್ನು ವಹಿಸಲಾಗಿತ್ತೋ ಅಲ್ಲಲ್ಲಿ ಶ್ರದ್ಧಾಭಕ್ತಿಯಿಂದ ಅದನ್ನು ವಹಿಸಿಕೊಂಡು ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ್ದರು. ಮಾತಾಜಿಗಳು ಸಹ ತಮ್ಮ ಊರು ಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಕೆಲವಡೆ ಸಾಮೂಹಿಕವಾಗಿ ರಥೋತ್ಸವಕ್ಕೆ ಪೋಷಕರಾಗಿ ಶ್ರಮಿಸಿದ್ದರು. ಭಾವಪ್ರಚಾರದ ಹೊರವಲಯದಲ್ಲಿ ಅನೇಕ ಸಂಘ-ಸಂಸ್ಥೆಗಳ ಪಾತ್ರವನ್ನು ಪ್ರತ್ಯೇಕವಾಗಿ ತಿಳಿಸಿದ್ದೇವೆ. ಪ್ರಖ್ಯಾತ ವಾಗ್ಮಿಗಳಾದ ಸೂಲಿಬೆಲೆ ಚಕ್ರವರ್ತಿಯವರು ರಾಯಚೂರು, ದಕ್ಷಿಣ ಕನ್ನಡ ಹಾಗೂ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ರಥೋತ್ಸವದ ಆಯೋಜನಾ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ದ್ದರು.

ಚಿಕ್ಕಮಗಳೂರಿನಲ್ಲಿ ರಾತ್ರಿ ಪಂಜಿನ ಮೆರವಣಿಗೆ, ಸಾಗರದಲ್ಲಿ ಅದ್ದೂರಿಯ ಮೆರವಣಿಗೆ ಮತ್ತು ಶಿರಸಿಯಲ್ಲಿ ಬೃಹತ್ ಮೋಟಾರು ವಾಹನಗಳ (ಬೈಕ್) ಸರಣಿಯ ಶೋಭಾಯಾತ್ರೆ ಜೊತೆಗೆ ಸೇರಿಸಲ್ಪಟ್ಟಿತ್ತು. ಸ್ಥಳೀಯ ಕಲಾತಂಡಗಳ ಅತ್ಯದ್ಭುತ ಕಲಾ ಪ್ರದರ್ಶನ ಕೂಡ ಅಲ್ಲಿ ನಡೆಯಿತು. ಶಿವಮೊಗ್ಗ ನಗರದಲ್ಲಿ ಬೃಹತ್ ಸಭಾ ಕಾರ್ಯಕ್ರಮ, ನಡೆಯಿತು. ಬೆಳಿಗ್ಗೆ ೮ ಗಂಟೆಗೆ ಪ್ರಾರಂಭವಾದ ಮೆರವಣಿಗೆ ಸುಮಾರು ಮಧ್ಯಾಹ್ನ ೩ರ ವರೆಗೆ ನಡೆಯಿತು. ಸಭಾ ಕಾರ್ಯಕ್ರಮ ಪೂರ್ಣಗೊಂಡಾಗ ರಾತ್ರಿ ಸುಮಾರು ೧೦ ಗಂಟೆಯಾಗಿತ್ತು. ದೂರದಿಂದ ಬಂದ ಕಲಾತಂಡಗಳ ಪ್ರದರ್ಶನ, ವಿವೇಕಾನಂದರ ಚಿಂತನೆಯ ಸಾಹಿತ್ಯದ ಪ್ರಚಾರ ಬಹಳ ಶ್ರೇಷ್ಠ ಮಟ್ಟದಲ್ಲಿ ಅಲ್ಲಿ ನಡೆದು, ರಥೋತ್ಸವವು ಅತ್ಯಂತ ಯಶಸ್ಸನ್ನು ಕಂಡಿತು.

ಕೊಡಗು ಜಿಲ್ಲೆ ತನ್ನದೇ ಆದ ವಿಶೇಷ ಸಂಸ್ಕೃತಿ ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿ. ಕೊಡಗಿನ ಜನರ ಸಕಾರಾತ್ಮಕ ಸ್ವಾಭಿಮಾನ (ತಮ್ಮ ಸಂಸ್ಕೃತಿಯ ಬಗೆಗಿನ ಅಭಿಮಾನ) ಅವರದೇ ಪಾರಂಪರಿಕವಾದ ಧಾರ್ಮಿಕ ವಿಶೇಷತೆಯನ್ನು ನಾವು ಗೌರವಿಸಲೇಬೇಕು. ಕೊಡಗಿನ ಜನಸಾಮಾನ್ಯರಿಂದ ಹಿಡಿದು ಎಲ್ಲಾ ವರ್ಗದವರೂ ವಿವೇಕಾನಂದ ರಥಯಾತ್ರೆಯನ್ನು ಸ್ವಾಗತಿಸಿದ ರೀತಿ ಬಹಳ ವಿಸ್ಮಯಕಾರಿ ಮತ್ತು ರೋಚಕ. ಈ ಜಿಲ್ಲೆಯ ಸಂಪೂರ್ಣ ಜವಾಬ್ದಾರಿಯ ಹೊಣೆಯನ್ನು ಪೊನ್ನಂಪೇಟೆ ಶ್ರೀರಾಮಕೃಷ್ಣ ಶಾರದಾಶ್ರಮದ ಮುಖ್ಯಸ್ಥರಾದ ಸ್ವಾಮಿ ಬೋಧಸ್ವರೂಪಾನಂದರು ವಹಿಸಿದ್ದರು. ಹಿರಿಯ ಸ್ವಾಮಿಗಳಾದ ಜಗದಾತ್ಮಾನಂದಜಿಯವರ ಸಾನ್ನಿಧ್ಯ ಮತ್ತು ಮಾರ್ಗದರ್ಶನ ದೊರಕಿದ್ದು ಇಲ್ಲಿ ಸ್ಮರಣೀಯ. ಈ ಜಿಲ್ಲೆ ಗಾತ್ರದಲ್ಲಿ ಚಿಕ್ಕದಾದರೂ ವಿವೇಕಾನಂದ ರಥಯಾತ್ರೆಯಲ್ಲಿ ತನ್ನದೇ ಆದ ಗರಿಮೆಯನ್ನು ಪ್ರಸ್ತುತಪಡಿಸಿತು. ಮೂರು ತಾಲೂಕು ಕೇಂದ್ರಗಳನ್ನು ಹೊಂದಿರುವ ಈ ಕೊಡಗು ಜಿಲ್ಲೆ ಆರು ಶೋಭಾ




ಯಾತ್ರೆಗಳನ್ನು ಮತ್ತು ಆರು ಸಭಾಕಾರ್ಯಕ್ರಮವನ್ನು ನಡೆಸಿತು. ಸ್ಥಳೀಯ ವೃತ್ತಪತ್ರಿಕೆಗಳ ಹಾಗೂ ಸ್ಥಳೀಯ ಟಿ.ವಿ. ಮಾಧ್ಯಮಗಳ ಮುಖಾಂತರ ವಿವೇಕಾನಂದರ ಮಹತ್ತರ ಜೀವನ ಮತ್ತು ಸಂದೇಶಗಳು ಜನ ಸಾಮಾನ್ಯರನ್ನು ತಲುಪುವಂತೆ ನಿರಂತರವಾಗಿ ಕೆಲಸ ಮಾಡಿದವು. ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಕೊಡಗಿನ ಪಾರಂಪರಿಕ ಕಲೆ, ನೃತ್ಯ, ವಾದ್ಯ, ಮದ್ದಲೆಗಳೊಂದಿಗೆ ಮತ್ತು ವಿದ್ಯಾರ್ಥಿಗಳ ದೊಡ್ಡ ಸಮೂಹ ಹಿಂದೆಂದೂ ಸಂಭವಿಸದ ರೀತಿಯಲ್ಲಿ ಅತ್ಯಂತ ಬೃಹತ್ ಮೆರವಣಿಗೆಯಾಗಿ ಹೆಸರು ಮಾಡಿತು. ಇದು ಸ್ಥಳೀಯ ಪಾರಂಪರಿಕ ಸೊಗಡಿನಿಂದ ಕೂಡಿದ್ದರಿಂದ ಪರಿಪೂರ್ಣವೂ ಬಹಳ ಆಕರ್ಷಕವೂ ಆಗಿತ್ತು. ಪ್ರಮುಖ ಊರುಗಳಲ್ಲಿ, ಉದಾಹರಣೆಗೆ ವಿರಾಜಪೇಟೆ, ಗೋಣಿಕೊಪ್ಪ, ಪೊನ್ನಂಪೇಟೆ ಮತ್ತು ತಿತಿಮತಿಗಳಲ್ಲಿ ಅದ್ದೂರಿಯ ಮೆರವಣಿಗೆ ಜರುಗಿದವು. ಈ ರೀತಿ ವೈಭವೋಪೇತ ಕೊಡಗಿನ ರಥಯಾತ್ರೆಯು ಯಶಸ್ಸನ್ನು ಕಂಡಿತು.

### ಭಾಗ–೧೩ : ಕರ್ನಾಟಕದ ರಥಯಾತ್ರೆಯ ಸಂಕಲ್ಪ ಮತ್ತು ಉದ್ದೇಶದ ಸಫಲತೆ, ಸಮೃದ್ಧಿ

ವಿವೇಕಾನಂದ ರಥಯಾತ್ರೆಯು ಸುಮಾರು ಒಂದು ವರ್ಷದಲ್ಲಿ ಪೂರ್ಣಗೊಂಡಿತ್ತು. ವಿಶೇಷವಾಗಿ ಆಯೋಜಕ ತಂಡದವರು ಕರ್ನಾಟಕದ ಉದ್ದಗಲಕ್ಕೂ ಸುಮಾರು ೩೩ ಸಾವಿರ ಕಿಲೋ




ಮೀಟರ್ ರಸ್ತೆ ಪ್ರಯಾಣವನ್ನು ಕ್ರಮಿಸಿದ್ದರು. ವಿವೇಕಾನಂದ ರಥವು ತನ್ನ ವೈಭವದೊಂದಿಗೆ ಸುಮಾರು ೧೧ ಸಾವಿರ ಕಿಲೋಮೀಟರ್ ಸುತ್ತಾಡಿತ್ತು. ಈ ರಥದ ಜೊತೆಯಲ್ಲಿ ಒಂದು ಬಸ್ಸು, ಮೈಸೂರಿನ 'ಜ್ಞಾನವಾಹಿನಿ', ರಥದ ಸಿಬ್ಬಂದಿಗಳ ವಾಹನ, ಸಂಚಾಲಕರ ಮತ್ತು ಆಯೋಜಕರ ತಂಡ ನಿರ್ವಹಣೆಯ ವಾಹನ, ಸಂಚಾರಿ ಪುಸ್ತಕ ಭಂಡಾರದ ವಾಹನಗಳು ಯಾತ್ರೆಯಲ್ಲಿ ಪಾಲ್ಗೊಂಡವು. ೧೫ ರಿಂದ ೨೦ ಸ್ವಯಂಸೇವಕರ ಪರಿಶ್ರಮದಿಂದ ಸುಮಾರು ೭ ಲಕ್ಷ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿದರು; ಸುಮಾರು ೧ ಲಕ್ಷಕ್ಕೂ ಹೆಚ್ಚು ಯುವಕರು ಸಭೆಯಲ್ಲಿ ನಡೆದ ವಿವೇಕಾನಂದ-ಚಿಂತನೆಯ ಧಾರೆಯಲ್ಲಿ ಭಾಗಿಗಳಾದರು; ೨೬ ಲಕ್ಷ ಮೌಲ್ಯದ ಪುಸ್ತಕವನ್ನು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಖರೀದಿಸಿದರು; ಸುಮಾರು ೩ ಲಕ್ಷಕ್ಕೂ ಹೆಚ್ಚು ಉಚಿತ ಕಿರುಹೊತ್ತಿಗೆಗಳು ಉಚಿತವಾಗಿ ಯುವಜನರ ಕೈಸೇರಿದವು. 'ವಿದ್ಯುತ್‌ವಾಣಿ' ಮತ್ತು 'ರಾಷ್ಟ್ರಜಾಗೃತಿ' ಎಂಬ, ವಿವೇಕಾನಂದರ ಉಪದೇಶಗಳ ಸಾರವನ್ನು ಒಳಗೊಂಡ ಪುಸ್ತಕಗಳು ತಮ್ಮದೇ ಆದ ಛಾಪನ್ನು ಮೂಡಿಸಿದವು.

ಹೀಗೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳನ್ನು, ಪ್ರಮುಖ ನಗರಗಳನ್ನು, ತಾಲೂಕು ಮತ್ತು ಗ್ರಾಮಾಂತರ ಪ್ರದೇಶಗಳನ್ನು ಸಂಚರಿಸಿ ಕೊನೆಯದಾಗಿ ಕನಕಪುರ ರಸ್ತೆಯಲ್ಲಿರುವ ಶ್ರೀ ರವಿಶಂಕರ್ ಗುರೂಜಿ ಅವರ 'ಆರ್ಟ್ ಆಫ್ ಲಿವಿಂಗ್'ನಲ್ಲಿ ಪೂರ್ಣಗೊಂಡಿತ್ತು. ಸ್ವಾಮಿ ಮಹಾವಾಕ್ಯಾನಂದರು ಈ ಒಂದು ರಥಯಾತ್ರೆಯೆಂಬ ಅಶ್ವಮೇಧ ಯಜ್ಞವು ಸಾರ್ಥಕತೆಯನ್ನು ಪಡೆಯಲು, ಅರ್ಥಪೂರ್ಣವಾಗಿ ಸಫಲತೆಯನ್ನು ಪಡೆಯಲು ಅಹರ್ನಿಶಿ ವಿವಿಧ ಸೇವೆ ಸಲ್ಲಿಸಿದ್ದಾರೆ. ✽

> 'ಅಹಂ' ಎಂಬುದು ಸಹಜವಾಗಿ ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಆ ಕಾರಣದಿಂದ ಭಕ್ತ ಜಾಗ್ರತ್ ಸ್ವಪ್ನ ಸುಷುಪ್ತಿ ಅವಸ್ಥೆಗಳನ್ನು ತಿದ್ದಿ ತೇಲಿಸಿಬಿಡುವುದಿಲ್ಲ. ಭಕ್ತ ಎಲ್ಲ ಅವಸ್ಥೆಗಳನ್ನೂ ಸ್ವೀಕರಿಸುತ್ತಾನೆ; ಸತ್ತ್ವ ರಜಸ್ಸು ತಮಸ್ಸು ಈ ಮೂರು ಗುಣಗಳನ್ನೂ ಅನುಮೋದಿಸುತ್ತಾನೆ. ಭಕ್ತನ ದೃಷ್ಟಿಯಿಂದ ಭಗವಂತನೇ ಚತುರ್ವಿಂಶತಿ ತತ್ತ್ವಗಳಾಗಿದ್ದಾನೆ, ಜೀವ ಜಗತ್ತಾಗಿದ್ದಾನೆ; ಆತನೇ ಸಾಕಾರ ಚಿನ್ಮಯ ರೂಪಿನಿಂದ ಕಾಣಿಸಿಕೊಳ್ಳುತ್ತಿದ್ದಾನೆ. — ಶ್ರೀರಾಮಕೃಷ್ಣರು